# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1057
ಸದಸ್ಯರ ಹೆಸರು : ಡಾ: ತಳವಾರ ಸಾಬಣ್ಣ
ಉತ್ತರಿಸುವ ದಿನಾಂಕ : 24-02-2023
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಜಿಲ್ಲೆಯಲ್ಲಿ ಯಾವ ಯಾವ ಅಲೆಮಾರಿ ಸಮುದಾಯದವರು ವಾಸಿಸುತ್ತಿದ್ದಾರೆ ಮತ್ತು ಅವರ ಜನಸಂಖ್ಯೆ ಎಷ್ಟು; (ವಿವರ ಒದಗಿಸುವುದು) | 2011ರ ಜನಗಣತಿ ಪ್ರಕಾರ ಕಲಬುರಗಿ ಜಿಲ್ಲೆಯಲ್ಲಿ ವಾಸಿಸುತ್ತಿರುವ ಅಲೆಮಾರಿ ಸಮುದಾಯ ಹಾಗೂ ಜನಸಂಖ್ಯೆ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಆ) | ಕುಟುಂಬದ ಸದಸ್ಯರೊಂದಿಗೆ ಕೊಳಚೆ ಪ್ರದೇಶದಲ್ಲಿ ವಾಸಿಸುತ್ತಿರುವ ಬುಡ್ಗ ಜಂಗಮ ಮತ್ತು ಸಿಗ್ಗಲಿಯರ್ ಅಲೆಮಾರಿ ಸಮುದಾಯದವರಿಗೆ ವಸತಿ ಮತ್ತು ಇನ್ನಿತರ ಸೌಲಭ್ಯ ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು; | ಪರಿಶಿಷ್ಟ ಜಾತಿ ಅಲೆಮಾರಿ ಬುಡ್ಗ ಜಂಗಮ ಸಮುದಾಯದವರು ಕಲಬುರಗಿ ಜಿಲ್ಲೆಯಲ್ಲಿ ವಿವಿಧ ಪ್ರದೇಶಗಳಲ್ಲಿ ವಾಸಿಸುತ್ತಿದ್ದು, ಕಲಬುರಗಿ ನಗರ ಪ್ರದೇಶದಲ್ಲಿ ಸ್ವಂತ ನಿವೇಶನ ಇರುವ 10 ಫಲಾನುಭವಿಗಳಿಗೆ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಸ್ವಂತ ನಿವೇಶನವಿರುವ 45 ಫಲಾನುಭವಿಗಳಿಗೆ ಒಟ್ಟಾರೆಯಾಗಿ 55 ಫಲಾನುಭವಿಗಳಿಗೆ 2021-22ನೇ ಸಾಲಿನಲ್ಲಿ ವಸತಿ ಯೋಜನೆಯಡಿಯಲ್ಲಿ ಜಿಲ್ಲಾಧಿಕಾರಿ, ಕಲಬುರಗಿ ಜಿಲ್ಲೆಯ ಇವರ ಅಧ್ಯಕ್ಷತೆಯ ಜಿಲ್ಲಾ ಆಯ್ಕೆ ಸಮಿತಿಯಲ್ಲಿ ಆಯ್ಕೆ ಮಾಡಿ ಸೌಲಭ್ಯವನ್ನು ಕಲ್ಪಿಸಲು ಕ್ರಮವಹಿಸಲಾಗುತ್ತಿದೆ.<br><br>ಮುಂದುವರೆದು, ನಿವೇಶನವಿಲ್ಲದೇ ಇರುವ ಫಲಾಪೇಕ್ಷಿಗಳಿಗೆ ನಿವೇಶನದ ಜೊತೆಗೆ ವಸತಿ ಸೌರ್ಕಯವನ್ನು ಕಲ್ಪಿಸಲು 2021-22ನೇ ಸಾಲಿನಲ್ಲಿ ಕಲಬುರಗಿ ತಾಲ್ಲೂಕಿನ ಶರಣಸಿರಗಿ ಗ್ರಾಮದ ಸರ್ವೆ ನಂಬರ್ 194 ರಲ್ಲಿ ವಿಸ್ತೀರ್ಣ 5-34 ಎಕರೆ ಜಮೀನನ್ನು ಜಿಲ್ಲಾಧಿಕಾರಿ, ಕಲಬುರಗಿ ಜಿಲ್ಲೆಯ ಇವರಿಂದ ಮಂಜೂರು ಮಾಡಲಾಗಿದೆ. ಈಗಾಗಲೇ ವಿವಿಧ ಸಮುದಾಯದವರು ಒಳಗೊಂಡಂತೆ 214 ಫಲಾಪೇಕ್ಷಿಗಳನ್ನು ನಿವೇಶನ ವಸತಿ ಸೌರ್ಕಯವನ್ನು/ ಕಲ್ಪಿಸಲು ಜಿಲ್ಲಾ ಆಯ್ಕೆ ಸಮಿತಿಯಲ್ಲಿ ಆಯ್ಕೆ ಮಾಡಲಾಗಿದ್ದು, 214 ಫಲಾಪೇಕ್ಷಿಗಳ ಪೈಕಿ 94 ಬುಡ್ಗಜಂಗಮ ಸಮುದಾಯದ ಕುಟುಂಬದವರಿಗೆ ನಿವೇಶನ/ ವಸತಿ ಸೌರ್ಕಯವನ್ನು ಕಲ್ಪಿಸಲು ಕ್ರಮವಹಿಸಲಾಗುತ್ತಿದೆ. |

| | | |
|---|---|---|
| ಇ) | ಅಲೆಮಾರಿಗಳಲ್ಲಿ ಯಾವ ಸಮುದಾಯದವರ ಕುರಿತು ಕುಲಶಾಸ್ತ್ರೀಯ ಅಧ್ಯಯನ ನಡೆಸಲಾಗಿದೆ? | ಪರಿಶಿಷ್ಟ ಜಾತಿಯ ಅಲೆಮಾರಿ/ ಅರೆ ಅಲೆಮಾರಿ/ ಸೂಕ್ಷ್ಮ ಮತ್ತು ಅತೀಸೂಕ್ಷ್ಮ ಸಮುದಾಯಕ್ಕೆ ಸೇರಿದ ಒಟ್ಟು 51 ಸಮುದಾಯಗಳ ಕುಲಶಾಸ್ತ್ರೀಯ ಅಧ್ಯಯನ ನಡೆಸಲು ಕ್ರಮವಹಿಸಲಾಗಿದ್ದು, ಅವುಗಳ ವಿವರ ಕೆಳಕಂಡಂತಿದೆ.<br>1. **ಅಧ್ಯಯನ ನಡೆಸಿ ಪುಸ್ತಕ ಮುದ್ರಿಸಲಾಗಿರುವ 18 ಸಮುದಾಯಗಳು:** ದಕ್ಕಲಿಗ, ಬುಡ್ಗಜಂಗಮ, ಹಂದಿಜೋಗಿ, ಸಿಳ್ಳೇಕ್ಯಾತ, ಸುಡುಗಾಡುಸಿದ್ದ, ಚೆನ್ನದಾಸರ್, ಮಾಂಗ್‌ಗಾರುಡಿ, ಗಂಟಿಚೋರ್, ಮಾಲಸನ್ಯಾಸಿ, ಸಿಂಧೋಳ್ಳು, ಅಸಾದಿ, ಮಾಸ್ತಿಕರು, ಪಂಬದ, ಮುಕ್ರಿ, ಭಂಗಿ, ಅಗೇರರು, ಹಳ್ಳೇರ್, ಮದಾರಿ.<br>2. **ಅಧ್ಯಯನ ಪೂರ್ಣಗೊಂಡು ವರದಿ ಸಲ್ಲಿಕೆಯಾಗಿರುವ ಸಮುದಾಯಗಳ ವಿವರ:-** ಗೋಸಂಗಿ, ಮಾಲದಾಸರಿ, ಜಗ್ಗಲಿ, ಹೊಲೆಯದಾಸರಿ, ತೋಟಿ, ಆದಿಯಾ, ಅಜಿಲ, ಬೈರ, ಬೆಳ್ಳಾರ, ಗೊಡ್ಡ, ವಲ್ಲಾರ್, ಜಾಂಬವುಲು, ಕಲ್ಲಾಡಿ, ಕೂಸಾ, ಕೊಟೆಗಾರ್ ಮೇಟ್ರಿ, ಮೈಲಾ ಮೇಘ್ವಾಲ್/ಮೆಂಗ್ವಾರ್, ನದಿಯಾ/ಹಾಡಿ, ನಲ್ಕದಾಯ, ನಯಾಡಿ, ಚಕ್ಕಲಿಯನ್, ಪಾಲೆ, ಪರವನ್, ಅರುಂಧತಿಯಾರ್, ಮಚಲ, ಕೊರಮ ಮತ್ತು ಕೊರಚ.<br>3. **ವರದಿ ಸಲ್ಲಿಕೆಯಾಗಬೇಕಾಗಿರುವ ಸಮುದಾಯಗಳ ವಿವರ:-** ದೊಂಬರು, ಬಕುಡ, ಬಂಡಿ, ಬತಡ, ಬಿಂದ್ಲಾ, ಬ್ಯಾಗರ. |
| ಈ) | ಅಲೆಮಾರಿ ಸಮುದಾಯದವರ ವಂಶಪಾರಂಪಾರಿಕವಾಗಿ ಬಂದ ಕುಲಕಸಬುಗಳನ್ನು ಪ್ರೋತ್ಸಾಹಿಸಲು ಸರ್ಕಾರ ರೂಪಿಸಿರುವ ಯೋಜನೆಗಳೇನು? | ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ವತಿಯಿಂದ ಈ ಕೆಳಕಂಡ ಯೋಜನೆಗಳು ಚಾಲ್ತಿಯಲ್ಲಿರುತ್ತವೆ.<br>1. ಸ್ವಯಂ ಉದ್ಯೋಗ (ನೇರಸಾಲ ಯೋಜನೆ)<br>2. ಸ್ವಯಂ ಉದ್ಯೋಗ ಉದ್ಯಮ ಶೀಲತಾ ಯೋಜನೆ<br>3. ಮೈಕ್ರೋ ಕ್ರೆಡಿಟ್ (ಪ್ರೇರಣಾ) ಯೋಜನೆ<br>4. ವಸತಿ ಯೋಜನೆ<br>5. ಭೂ ಒಡತನ ಯೋಜನೆ<br>6. ಲೇಔಟ್ ನಿರ್ಮಾಣ ಯೋಜನೆ |

**SWD/80/SDC/2023**

**(ಕೋಟ ಶ್ರೀನಿವಾಸ ಪೂಜಾರಿ)**
ಸಮಾಜ ಕಲ್ಯಾಣ ಮತ್ತು
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

**ಚುಕ್ಕೆ ಗುರುತಿನ ಪ್ರಶ್ನೆಗೆ ಸಂಖ್ಯೆ; 1057 ಕ್ಕೆ ಅನುಬಂಧ**

| ಕ್ರಸಂ. | ಜಿಲ್ಲೆಯಲ್ಲಿ ವಾಸಿಸುತ್ತಿರುವ ಸಮೂದಾಯ | ಜನ ಸಂಖ್ಯೆ |
|---|---|---|
| 1 | ದಕ್ಕಲ್/ದಕ್ಕಲ ದಕ್ಕಲಿಗ | 07 |
| 2 | ಶಿಳ್ಳೆಕ್ಯಾತ | 24 |
| 3 | ಹೊಲೆಯದಾಸರಿ | 28 |
| 4 | ಬಕುಡ | 06 |
| 5 | ಮಾಸ್ತಿ/ ಮನ್ನೆ | 07 |
| 6 | ಮುಕ್ರಿ | 01 |
| 7 | ಕಲ್ಲಾಡಿ | 14 |
| 8 | ಮೈಲ | 03 |
| 9 | ಮೆಂಗಾವರ್/ಮೆಂಗವಲ್ | 143 |
| 10 | ಬಿಂಡ್ಲ | 07 |
| 11 | ಬೈಗಾರ | 17 |
| 12 | ಪರವನ್ | 02 |
| 13 | ಬುಡ್ಗ ಜಂಗಮ | 2607 |
| 14 | ಚನ್ನ ದಾಸರ/ಹೊಲೆಯ ದಾಸರ್ | 1160 |
| 15 | ಹಲ್ಲೀರ್ | 16 |
| 16 | ವಲ್ಲ್ಹಾರ್ | 02 |
| 17 | ಕೊರಮ/ಕೊರವ,ಕೊರವರ್ | 6949 |
| 18 | ಕೊರಚ (ಕೊರಚರ್) | 66 |
| 19 | ಮದರಿ | 05 |
| 20 | ಮಾಂಗಗಾರುಡಿ | 658 |
| 21 | ಸುಡಗಾಡುಸಿದ್ದ | 636 |
| 22 | ಸಿಂಧೂಳ್ಳು | 04 |
| 23 | ಬಂಡಿ | 18 |
| 24 | ಮಾಲದಾಸರಿ | 59 |
| 25 | ಹಂದಿ ಜೋಗಿಸ್ | 178 |
| 26 | ಬೈರ | 04 |
| 27 | ಬೆಳ್ಳಾರ | 01 |
| 28 | ದೊಂಬರ | 266 |
| 29 | ಮಚಲ | 04 |
| **ಒಟ್ಟು** | | **12892** |